SCCH – 01
MVC No.8189/2025
PW1

## ಮುಖ್ಯ ನ್ಯಾಯಾಧೀಶರು, ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರು.

## ಎಂ.ವಿ.ಸಿ. ಸಂಖ್ಯೆಃ 8189/2025

**PW-1**

| | |
|---|---|
| ಹೆಸರು | ಪ್ರಕಾಶ್ |
| ತಂದೆಯ ಹೆಸರು | ಜಯಪಾಲ್ |
| ವಯಸ್ಸು | **52** ವರ್ಷ |
| ವೃತ್ತಿ | ಇಲ್ಲ |
| ವಿಳಾಸ | ತ್ಯಾಗರಾಜ ನಗರ, ಬೆಂಗಳೂರು |

**ದಿನಾಂಕಃ 29.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದಃ**

1) ನಾನು ಈ ಪ್ರಕರಣದಲ್ಲಿ ಅರ್ಜಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯಕ್ಕೆ ಬದಲಾಗಿ, ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಯ ಮೇರೆಗೆ ಮತ್ತು ಅದಕ್ಕೆ ಅನುಸಾರವಾಗಿ ನನ್ನ ವಕೀಲರು ಸಿದ್ಧಪಡಿಸಿದ್ದಾರೆ.

2) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೊಕದ್ದಮೆ ನಂಃ **203/2025** ರಲ್ಲಿ ದಾಖಲಾಗಿರುವ ಪ್ರಥಮ ವರ್ತಮಾನ ವರದಿಯ ಯಥಾ ನಕಲನ್ನು

ಹಾಜರುಪಡಿಸಿದ್ದು ಅದನ್ನು **ನಿ.ಪಿ.1** ಎಂದು, ದೂರಿನ ಯಥಾ ನಕಲನ್ನು ನಿ.ಪಿ.**2** ಎಂದು, ಸ್ಥಳ ಪಂಚನಾಮೆಯ ಯಥಾ ನಕಲನ್ನು ನಿ.ಪಿ.**3** ಎಂದು, ವಾಹನ ಅಮಾನತ್ತು ಪಂಚನಾಮೆಯ ಯಥಾ ನಕಲನ್ನು ನಿ.ಪಿ.**4** ಎಂದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸರು ಸಲ್ಲಿಸಿರುವ ಅಂತಿಮ ವರದಿಯ ಯಥಾ ನಕಲನ್ನು ನಿ.ಪಿ.**5** ಎಂದು ಗುರುತಿಸಿದ್ದೇನೆ.

3) ಗಾಯದ ಪ್ರಮಾಣ ಪತ್ರದ ಯಥಾ ನಕಲನ್ನು ನಿ.ಪಿ.**6** ಎಂದು, ನಾನು ಸಂಜಯಗಾಂಧಿ ಆಸ್ಪತ್ರೆಯಲ್ಲಿ ದಿಃ**02.10.2025** ರಿಂದ ದಿಃ**10.10.2025** ರ ವರೆಗೆ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿ.ಪಿ.**7** ಎಂದು, ಸಂಜಯಗಾಂಧಿ ಆಸ್ಪತ್ರೆಯ ಅಪಘಾತ ರಿಜಿಸ್ಟರ್ ಎಕ್ಸ್ ಟ್ರ್ಯಾಕ್ಟ್ ನ ಯಥಾ ನಕಲನ್ನು ನಿ.ಪಿ.**8** ಎಂದು ಗುರುತಿಸಿದ್ದೇನೆ.

4) ನನ್ನ ಆಧಾರ್ ಕಾರ್ಡಿನ ನೋಟರೀಕೃತ ನಕಲನ್ನು ನಿ.ಪಿ.**9** ಎಂದು ಮತ್ತು ನನ್ನ ಚಾಲನಾ ಪರವಾನಗಿಯ ನೋಟರೀಕೃತ ನಕಲನ್ನು ನಿ.ಪಿ.**10** ಎಂದು ಗುರುತಿಸಿದ್ದೇನೆ. **(**ಸಾಕ್ಷಿಯು ನಿ.ಪಿ.**9** ಮತ್ತು **10** ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನೋಟರೀಕೃತ ನಕಲುಗಳೊಂದಿಗೆ ಹೋಲಿಸಿದ ನಂತರ ಸಾಕ್ಷಿಗೆ ಹಿಂತಿರುಗಿಸಲಾಗಿದೆ**).**

5) ವೈದ್ಯಕೀಯ ಖರ್ಚು ರೂ.**45,820/-** ಕ್ಕೆ ಸಂಬಂಧಿಸಿದಂತೆ **25** ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**11** ಎಂದು, **5** ಹೊರರೋಗಿ ಚೀಟಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**12** ಎಂದು, **3** ಔಷಧಿ ಚೀಟಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**13** ಎಂದು ಗುರುತಿಸಿದ್ದೇನೆ.

**ಈ ಹಂತದಲ್ಲಿ ಅರ್ಜಿದಾರ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದಾರೆ. ನ್ಯಾಯ ಹಿತರಕ್ಷಣೆಯ ದೃಷ್ಟಿಯಿಂದ ಸಮಯಾವಕಾಶ ನೀಡಲಾಗಿದೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.